

## ಮೂರನೇ ಓಟು ಯಾರದ್ದು?

ವೆಂಕ ಮಂಡಲ ಪಂಚಾಯ್ತಿ ಚುನಾವಣೆಯಲ್ಲಿ ಪ್ರತಿ ಬಾರಿ ಸೋಲುತ್ತಿದ್ದ. ಆದರೂ ಛಲ ಬಿಡದ ವಿಕ್ರಮನಂತೆ ಈ ಬಾರಿಯೂ ಚುನಾವಣೆಗೆ ಸ್ಪರ್ಧಿಸಿದ. ಈ ಬಾರಿಯೂ ವೆಂಕ ಸೋತ.
ಮನೆಗೆ ಬಂದ ಕೂಡಲೇ ಹೇಳಿದ, 'ವೆಂಕಿ, ಈ ಸಲ ನನಗೆ ಮೂರು ಮತಗಳು ಬಂದಿವೆ'.
ವೆಂಕಿ ತಕ್ಷಣ ಕೇಳಿದಳು, 'ಒಂದು ನಾನು, ಇನ್ನೊಂದು ನೀವು, ಮತ ಹಾಕಿದ ಆ ಮತ್ತೊಬ್ಬಳು ಯಾರು? ನಿಮಗೆ ಮೂರು ಮತ ಹೇಗೆ ಬಂದವು?' ವೆಂಕಿಯ ಅನುಮಾನಕ್ಕೆ ವೆಂಕ ಬೆಪ್ಪಾಗಿ ನಿಂತ.

**ಸಂಗನಬಸಪ್ಪ ಜಿ.ಸಿ.**

## ಲೈಟು ಕಂಬ

'ಏನಿದು ದುಬ್ಬೇಶಿ? ತಲೆಗೆ ಬ್ಯಾಂಡೇಜು? ಎಲ್ಲಿ ಪೆಟ್ಟು ಮಾಡ್ಕೊಂಡೆ?' ಎಂದು ಕೇಳಿದ ಗುಂಡ. 'ನಮ್ಮ ಮನೆ ಮುಂದೆ ಲೈಟು ಕಂಬವಿದೆ, ನೋಡಿದ್ದೀಯಾ?' ಪ್ರಶ್ನಿಸಿದ ದುಬ್ಬೇಶಿ.
'ಹೂಂ, ನೋಡಿದ್ದೇನೆ. ಲೈಟು ಕಂಬಕ್ಕೂ, ನಿನ್ನ ತಲೆಯ ಬ್ಯಾಂಡೇಜಿಗೂ ಏನು ಸಂಬಂಧ?' ಎಂದ ಗುಂಡನಿಗೆ ಅವನ ಮಾತಿನ ತಲೆ ಬುಡ ಗೊತ್ತಾಗಲಿಲ್ಲ.
'ಸಂಬಂಧ ಇದೆ ಕಣಯ್ಯ, ನಿನ್ನೆ ರಾತ್ರಿ ಮನೆಗೆ ಹೋಗುವಾಗ ನಾನು ಆ ಲೈಟು ಕಂಬ ನೋಡಲಿಲ್ಲ...'

**ಶಿವಮೊಗ್ಗ ಗೀತಾಶಾಸ್ತ್ರಿ**



ಚಿತ್ರಗಳು: ಗಣೇಶ ಆಚಾರ್ಯ